

ವೇಣುಗೋಪಾಲ ನಂಬಿಯಾರ್

(ವೇಣುಗೋಪಾಲ ನಂಬಿಯಾರ್ ಮುನಿಯೂರ್ ಪೆರಿಯಾ)

**(03.02.1956 – 28.11.2017)**

ವೇಣುಗೋಪಾಲ ನಂಬಿಯಾರ್ ಮಂಗಳೂರು ಜಿಲ್ಲೆಯ ಬಿ.ಎಸ್.ಎನ್.ಎಲ್.ಇ.ಯು ಸಂಘಟನೆಯ ಸಂಘಟನಾಕಾರರಲ್ಲಿ ಒಬ್ಬ ಪ್ರಮುಖ ಸಂಗಾತಿ. ಕಾಂ. ನಾರಾಯಣರಾವ್, ಕಾಂ.ದೇಜಪ್ಪ, ಕಾಂ.ಹೆಚ್.ಡಿ,ಪೈ, ಕಾಂ.ಹರಿಶ್ಚಂದ್ರ ರಾವ್ ಮುಂತಾದವರು ಇ.ಹಿ ನಂಬೂದಿರಿ ಸಂಘಟನೆಯಿಂದ ಬಿ.ಎಸ್.ಎನ್.ಎಲ್.ಇ.ಯು ಸಂಘಟನೆಗೆ ಬಂದರೆ, ನಂಬಿಯಾರ್ ಅವರು ಬಿ.ಎಸ್.ಎನ್.ಎಲ್.ಇ.ಯು ಸಂಘಟನೆ ಪ್ರಾರಂಭವಾದ ಮೇಲೆ ಸಂಘಟನೆಗೆ ಬಂದವರು.

ನಂತರದ ದಿನಗಳಲ್ಲಿ, ಮಂಗಳೂರು ಜಿಲ್ಲೆಯ ಸಂಘಟನೆ ಸಕ್ರಿಯವಾಗಿ ಕಾರ್ಯಚಟುವಟಿಕೆಗಳನ್ನು ನಡೆಸಲು ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡು, ಜಿಲ್ಲೆಯಲ್ಲಿ ನಮ್ಮ ಸಂಘಟನೆ ಗಟ್ಟಿಯಾಗಿ ಬೇರೂರಲು ಸಹಾಯಕಾರಿಯಾದವರು; ಸದಸ್ಯತ್ವ ಪರಿಶೀಲನೆ, ಮುಷ್ಕರಗಳು, ಮುಂತಾದ ಪ್ರಮುಖ ಚಟುವಟಿಕೆಗಳ ಸಂದರ್ಭದಲ್ಲಿ ಜಿಲ್ಲೆಯಾದ್ಯಾಂತ ಪ್ರವಾಸ ಮಾಡಿ, ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದವರು.

ಹಲವು ಬಾರಿ ಜಿಲ್ಲಾ ಕಾರ್ಯದರ್ಶಿಯಾಗಿ – ಜಿಲ್ಲಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ, ವಲಯ ಮಟ್ಟದಲ್ಲಿ ವಲಯ ಉಪಾಧ್ಯಕ್ಷರೂ ಮತ್ತು ವಲಯ ಸಹಾಯಕ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದವರು. ಒಂದು ಬಾರಿ, ಸದಸ್ಯತ್ವ ಪರಿಶೀಲನಾ ವೇಳೆಯಲ್ಲಿ ಕೇರಳದ ಸಂಗಾತಿಗಳು ಕಾಸರಗೋಡಿಗೆ ಬಂದು, ಕನ್ನಡದಲ್ಲಿ ಪ್ರಚಾರ ಅಭಿಯಾನ ಮಾಡಬೇಕೆಂದು ಕೇಳಿಕೊಂಡಾಗ, ನಂಬಿಯಾರ್ ಬಿ.ಪಿ. ನಾನು ಹೋಗಿ ನಾನು ಕನ್ನಡದಲ್ಲೂ ಮತ್ತು ನಂಬಿಯಾರ್ ಮಳೆಯಾಲಂ ನಲ್ಲೂ ಪ್ರಚಾರ ಮಾಡಿ ಬಂದಿದ್ದೆವು;

ಇಂದು ಬೆಳಗ್ಗೆ ಅವರ ನಿಧನದ ಸುದ್ದಿಯನ್ನು ಜಿಲ್ಲಾ ಕಾರ್ಯದರ್ಶಿ ಕಾಂ.ಪಾಶಾ ಅವರು ತಿಳಿಸಿದಾಗ ಕೆಲವು ಹೊತ್ತು ನಂಬಲಿಕ್ಕೆ ಸಾಧ್ಯವಾಗಲಿಲ್ಲ; ಇದು ಕೇವಲ ಮಂಗಳೂರು ಜಿಲ್ಲೆಗೆ ಮಾತ್ರ ಆಘಾತಕಾರಿ ಸುದ್ದಿಯಲ್ಲ; ನಷ್ಟವಲ್ಲ; ಇಡೀ ವಲಯಕ್ಕೆ ಆಘಾತಕಾರಿಯಾದುದು; ಅಕಾಲಿಕವಾದುದು;

ಬಿ.ಎಸ್.ಎನ್.ಎಲ್.ಇ.ಯು ಕಾಂ.ವೇಣುಗೋಪಾಲ ನಂಬಿಯಾರ್ ಅವರು ಬಿ.ಎಸ್.ಎನ್.ಎಲ್.ಇ.ಯು ಸಂಘಟನೆಗೆ ಮಾಡಿದ ಎಲ್ಲ ಸೇವೆಗಳನ್ನೂ ನೆನಪಿಸಿಕೊಳ್ಳುತ್ತಾ, ಅವರ ಕುಟುಂಬದ ಈ ಅತ್ಯಂತ ನೋವಿನ ಗಳಿಗೆಯಲ್ಲಿ ನಾವೆಲ್ಲರೂ ಅವರ ಕುಟುಂಬದ ಸದಸ್ಯರೊಟ್ಟಿಗೆ ಇದ್ದೇವೆ; ಅವರ ನೋವನ್ನು ನಾವುಗಳೂ ಸಹ ಭರಿಸುತ್ತೇವೆ ಎಂದು ಹೇಳುತ್ತಾ ಸಂಗಾತಿ ನಂಬಿಯಾರ್ ಅವರಿಗೆ ವಲಯದ ಪರವಾಗಿ,ಕೆಂಪು ನಮನಗಳನ್ನು ಸಲ್ಲಿಸುತ್ತೇವೆ.

ಗುಂಡಣ್ಣ ಸಿ.ಕೆ. ವಲಯ ಕಾರ್ಯದರ್ಶಿ, ಬಿ.ಎಸ್.ಎನ್.ಎಲ್.ಇ.ಯು.

**28.11.2017**